

## ವೈಎಸಿ ರೀಡರ್

ಇದು ‘ಯೆಟ್ ಅನದರ್ ಕಾಮಿಕ್ ರೀಡರ್’. ಐಪ್ಯಾಡ್‌ನಲ್ಲಿ ಕಾಮಿಕ್ ಓದುವವರಿಗೆ ಈ ಅಪ್ಲಿಕೇಶನ್ ಉಪಯುಕ್ತ. ಇದು ಡಾರ್ಕ್ ಹಾರ್ಸ್ ಕಾಮಿಕ್ಸ್ ಅಪ್ಲಿಕೇಶನ್‌ನಂತೆ ಕಂಡರೂ ಕಾಮಿಕ್ಸ್ ಸ್ಟ್ರಿಪ್‌ಗಳನ್ನು, ಅವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಹಾಗೂ ಓದುವ ರೀತಿಯನ್ನು ಸರಳೀಕರಿಸುತ್ತದೆ. ಇದು ಪಿಡಿಎಫ್, ಝಿಪ್ ಫೈಲ್‌ಗಳನ್ನೂ ಬೆಂಬಲಿಸುತ್ತದೆ. ಇದು ಲಿನಕ್ಸ್, ಮ್ಯಾಕ್ ಮತ್ತು ವಿಂಡೋಸ್‌ನಲ್ಲಿ ಲಭ್ಯವಿದ್ದು ಕಾಮಿಕ್ಸ್ ಅನ್ನು ಐಪ್ಯಾಡ್ ಅಪ್ಲಿಕೇಶನ್‌ಗೆ ವರ್ಗಾವಣೆ ಮಾಡಿ ಓದಲು ಅನುಕೂಲ ಮಾಡಿಕೊಡುತ್ತದೆ. ಇದಕ್ಕೆ ಶುಲ್ಕವಿದೆ.




## ಡ್ಯುಒಲಿಂಗೊ

ಹೊಸ ಭಾಷೆಯನ್ನು ಕಲಿಯುವುದಿದ್ದರೆ ಐಪ್ಯಾಡ್ ಅಪ್ಲಿಕೇಶನ್ ಡ್ಯುಒಲಿಂಗೊ ನೆರವಿಗೆ ಬರುತ್ತದೆ. ಈ ಪಟ್ಟಿಯಲ್ಲಿ ಸ್ಪಾನಿಷ್, ಜರ್ಮನ್, ಫ್ರೆಂಚ್, ಅಮೆರಿಕನ್ ಇಂಗ್ಲಿಷ್ ಮೊದಲಾದ ಭಾಷೆಗಳಿದ್ದು, ವಿದೇಶಗಳಿಗೆ ತೆರಳುವವರಿಗೆ ಉಪಯೋಗಕ್ಕೆ ಬರುತ್ತದೆ. ವ್ಯಾಕರಣ, ಸರಳ ವಾಕ್ಯಗಳಿಂದ ಆರಂಭಿಸಿ ಸುಲಲಿತವಾಗಿ ಮಾತನಾಡಲೂ ಕಲಿಯಬಹುದು. ನಿಮ್ಮ ಕಲಿಕಾ ಪ್ರಗತಿಯನ್ನೂ ಅದು ಮೌಲ್ಯಮಾಪನ ಮಾಡುತ್ತದೆ. ಧ್ವನಿಗೆ ‘ಸಿರಿ’ ಅಪ್ಲಿಕೇಶನ್ ಬೆಂಬಲವಿದೆ. ಭಾಷಾಂತರವನ್ನು ಸಿರಿ ಮೂಲಕವೂ ಮಾಡಬಹುದು. ಈ ಅಪ್ಲಿಕೇಶನ್ ಸಂಪೂರ್ಣ ಉಚಿತ.




## ಮೊಬೈಲ್‌ನಲ್ಲೂ ಸ್ಕೈಪ್

ಸಂವಹನಕ್ಕೆ ಅಂದರೆ ವೈಸ್, ವಿಡಿಯೊ, ಚ್ಯಾಟ್‌ಗೆ ಸ್ಕೈಪ್ ಅನ್ನು ಈಗ ವ್ಯಾಪಕವಾಗಿ ಬಳಸಲಾಗುತ್ತದೆ. ಕೇವಲ ಕಂಪ್ಯೂಟರ್‌ಗೆ ಮಾತ್ರವಲ್ಲ, ವಿಂಡೋಸ್ ಫೋನ್‌ಗೆ ಈ ಅಪ್ಲಿಕೇಶನ್ ಅಳವಡಿಸಿಕೊಂಡರೆ ಕಾಲ್ ಬಂದಾಗ ಅಥವಾ ಚ್ಯಾಟ್‌ಗೆ ಆಹ್ವಾನ ಬಂದಾಗ ನಿಮ್ಮನ್ನು ಎಚ್ಚರಿಸುವ ಕೆಲಸವನ್ನೂ ಮಾಡುತ್ತದೆ. ಅಪ್ಲಿಕೇಶನ್ ಅನ್ನು ಉಚಿತವಾಗಿ ಅಳವಡಿಸಿಕೊಳ್ಳಬಹುದು. ಡೆಸ್ಕ್‌ಟಾಪ್‌ನಲ್ಲಿ ಈಗಾಗಲೆ ಅಕೌಂಟ್ ಇದ್ದರೆ ಇನ್ನೂ ಸುಲಭ. ವಿಂಡೋಸ್ ಫೋನ್‌ನಲ್ಲಿ ಸೈನಪ್ ಮಾಡಿದರೆ ಸಾಕು. ಶುಲ್ಕವನ್ನು ಚಂದಾದಾರರಾಗಿ ಅಥವಾ ಬಳಕೆಯ ಮೇಲೆ ನೀಡಬೇಕಾಗುತ್ತದೆ.

## ಏವಿಯರಿ

ಇದು ಫೋಟೊ ಎಡಿಟಿಂಗ್ ಸಾಫ್ಟ್‌ವೇರ್. ಇದು ಡಿಫಾಲ್ಟ್ ಐಫೋನ್ ಹಾಗೂ ವಿಂಡೋಸ್ 8 ಅಪ್ಲಿಕೇಶನ್ ಆಗಿಯೂ ಲಭ್ಯ. ಇದರಲ್ಲಿ ಫೋಟೋವನ್ನು ಸುಧಾರಿಸುವ ಸ್ಟಿಕರ್, ಕ್ರಾಪಿಂಗ್, ಕಲೆ ನಿವಾರಿಸುವ ಸಾಧನ, ಡ್ರಾಯಿಂಗ್ ಬ್ರಷ್ ಮೊದಲಾದ ಸಲಕರಣೆಗಳು ಇವೆ.




■ ಎಸ್. ತುಂಬೆ